**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**
**ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ .**
**S.C.5021/2025**

| | |
|---|---|
| ಪಿರ್ಯಾದುದಾರ | ಕೋಡಿಹಳ್ಳಿ ಪೊಲೀಸ್ ಠಾಣೆ |
| --ವಿರುದ್ಧ-- | |
| ಆರೋಪಿ | 1. ನಾಗೇಶ<br>2. ರಾಮೇಗೌಡ<br>3. ಪ್ರತಾಪ<br>4. ರಾಘವೇಂದ್ರ<br>5. ಶಂಕರ |

**ದೋಷಾರೋಪಣೆ**

ಶ್ರೀ ಕುಮಾರ್.ಹೆಚ್.ಎನ್., ಬಿ.ಎ.ಎಲ್., ಎಲ್‌ಎಲ್.ಬಿ., 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರದಲ್ಲಿ, ಆದ ನಾನು

| | | |
|---|---|---|
| ಆರೋಪಿ | 1 | ನಾಗೇಶ<br>ಬಿನ್ ದೊಡ್ಡಿಗೌಡ,<br>ವಯಸ್ಸು 32 ವರ್ಷ<br>ವಾಸಃ-<br>ಕಪನಿಗೌಡನದೊಡ್ಡಿ ಗ್ರಾಮ,<br>ಉಯ್ಯಂಬಳ್ಳಿ ಹೋಬಳಿ,<br>ಕನಕಪುರ ತಾಲ್ಲೂಕು,<br>ರಾಮನಗರ. |
| | 2 | ರಾಮೇಗೌಡ<br>ಬಿನ್ ಶಿವರಾಮೇಗೌಡ,<br>ವಯಸ್ಸು 31 ವರ್ಷ,<br>ವಾಸಃ-<br>ನಾಯ್ಕನಹಳ್ಳಿ ಗ್ರಾಮ,<br>ಸಾತನೂರು ಹೋಬಳಿ,<br>ಕನಕಪುರ ತಾಲ್ಲೂಕು,<br>ರಾಮನಗರ. |

| | | |
|---|---|---|
| | 3 | ಪ್ರತಾಪ<br>ಬಿನ್ ಗಣೇಶ,<br>ವಯಸ್ಸು 28 ವರ್ಷ,<br>ವಾಸಃ-<br>ಮೇಗಳಬೀದಿ,<br>ಹಾರೋಹಳ್ಳಿ ಟೌನ್,<br>ಕನಕಪುರ ತಾಲ್ಲೂಕು,<br>ರಾಮನಗರ. |
| | 4 | ರಾಘವೇಂದ್ರ<br>ಬಿನ್ ಜಯರಾಮು,<br>ವಯಸ್ಸು 28 ವರ್ಷ,<br>ವಾಸಃ-<br>ನಂ.297, 1ನೇ ಮುಖ್ಯರಸ್ತೆ,<br>ಅಷ್ಟಲಕ್ಷ್ಮೀ ಕೆರೆ ಹತ್ತಿರ,<br>ಜೆ.ಪಿ.ನಗರ,<br>ಬನಶಂಕರಿ,<br>ಬೆಂಗಳೂರು. |
| | 5 | ಶಂಕರ<br>ಬಿನ್ ಗವಿಯಪ್ಪ,<br>ವಯಸ್ಸು 29 ವರ್ಷ,<br>ವಾಸಃ-<br>ಆನೇಕಲ್ ಮುಖ್ಯರಸ್ತೆ,<br>ಹಾರೋಹಳ್ಳಿ ಟೌನ್,<br>ಕನಕಪುರ ತಾಲ್ಲೂಕು,<br>ರಾಮನಗರ. |

ಆದ ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,

ದಿಃ22.08.2018ರಂದು ರಾತ್ರಿ 8-00 ಗಂಟೆ ಸಮಯದಲ್ಲಿ ಕೋಡಿಹಳ್ಳಿ ಪೊಲೀಸ್ ಠಾಣಾ ಸರಹದ್ದು ಉಯ್ಯಂಬಳ್ಳಿ ಹೋಬಳಿ, ಮುಳ್ಳಹಳ್ಳಿ-ನೇರಳಹಟ್ಟಿ ಮಧ್ಯೆ ಹಾರೋಬೆಲೆ ಡ್ಯಾಮ್‌ನ ಚಾನೆಲ್ ರಸ್ತೆಯ ಬಳಿ ನೀವು ಆರೋಪಿ-1 ರಿಂದ 5ರವರು ಕೆಎ-03-ಇಎಸ್-214 ಮತ್ತು

ಕೆಎ-42-ಎಕ್ಸ್-4282 ಹೋಂಡಾ ಯುನಿಕಾರ್ನ್ ಮೋಟರ್ ಬೈಕ್‌ಗಳನ್ನು ನಿಲ್ಲಿಸಿಕೊಂಡು ಕೈಗಳಲ್ಲಿ ಮಾರಕಾಸ್ತ್ರಗಳಾದ ಕಬ್ಬಿಣದ, ಮರದ ದೊಣ್ಣೆಗಳು ಮತ್ತು ಖಾರದಪುಡಿ ಪ್ಯಾಕೇಟನ್ನು ಹಿಡಿದುಕೊಂಡು ಸಾರ್ವಜನಿಕರನ್ನು ಅಡ್ಡಗಟ್ಟಿ ತಡೆದು ದರೋಡೆ ಮಾಡಲು ಸಿದ್ಧತೆ ಮಾಡಿಕೊಂಡು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 399ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯೊಳಗೆ ಎಸಗಿರುತ್ತೀರಿ ಎನ್ನುವುದಾಗಿದೆ.

ಎರಡನೆಯದಾಗಿ ಸದರಿ ದಿನ, ಸ್ಥಳ ಮತ್ತು ಸಮಯದಲ್ಲಿ ನೀವು ಆರೋಪಿ-1 ರಿಂದ 5ರವರು ಸಾರ್ವಜನಿಕರನ್ನು ಅಡ್ಡಗಟ್ಟಿ ಮಾರಕಾಸ್ತ್ರಗಳನ್ನು ತೋರಿಸಿ, ಹೊಡೆದು ಅವರ ಬಳಿ ಸಿಗಬಹುದಾದ ಮೊಬೈಲ್, ಹಣ ಹಾಗೂ ಬೆಲೆಬಾಳುವ ಚಿನ್ನಾಭರಣಗಳನ್ನು ದರೋಡೆ ಮಾಡುವ ಉದ್ದೇಶದಿಂದ ಒಟ್ಟುಗೂಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 402ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

ನಾನು ಈ ಮೂಲಕ ಸದರಿ ಆರೋಪಣೆಗಾಗಿ ನಿಮ್ಮನ್ನು ವಿಚಾರಣೆಗೆ ಒಳಪಡಲು ನಿರ್ದೇಶಿಸುತ್ತೇನೆ.

**(ಕುಮಾರ್ ಹೆಚ್.ಎನ್)**
**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.**

**ದಿ:16.09.2025.**